Reg no KKN 12 — For Influential Publicity — 29-11-76

ವೈಭವ ಮಹೋತ್ಸವ ನೆರವೇರಿತು ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್ 5 ಪೈಸೆ

'Satyavadi' Diamond Jubilee

– "ಸತ್ಯವಾದಿ" ವಜ್ರಮಹೋತ್ಸವ –

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರ ಆಶೀರ್ವಾದ ಸಂದೇಶ

ಶ್ರೀ ಸತ್ಯವಾದಿ ಪತ್ರಿಕೆಯ ವಜ್ರಮಹೋತ್ಸವವು ವೈಭವಪೂರಿತವಾಗಿ ನೆರವೇರಿ, ಪತ್ರಿಕೆಯೂ, ಸಂಪಾದಕರೂ ಇನ್ನೂ ಹಲವಾರು ವರ್ಷ ನಾಗರೀಕರೆಲ್ಲರ ಅಭಿಮಾನ ಪ್ರೀತಿಯೊಂದಿಗೆ ಮುಂದುವರಿಯುತ್ತಾ ಹೆಸರುವಾಸಿಯಾಗಿ ತನ್ನ ಉತ್ತಮ ಕೀರ್ತಿಯೊಂದಿಗೆ ಮುಂದುವರಿಯಲೆಂದು ಶ್ರೀ ಶ್ರೀ ಮಹಾಸ್ವಾಮಿಗಳವರು ಶ್ರೀ ಶಾರದಾ ಚಂದ್ರಮೌಳೀಶ್ವರರನ್ನು ಪ್ರಾರ್ಥಿಸಿ ಆಶೀರ್ವದಿಸಿರುವ ಮಂತ್ರಾಕ್ಷತೆ ಪ್ರಸಾದದೊಂದಿಗೆ ಒಂದು ನೂರ ಒಂದು ರೂ. ಗಳನ್ನು ಅನುಗ್ರಹಿಸಿರುತ್ತಾರೆ.

ಕರಣಸಿಂಗ್‌ರವರಿಂದ ತಿರಸ್ಕಾರ

ನವ ದೆಹಲಿ — ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಕರಣಸಿಂಗರು, "ಕುಟುಂಬ ಯೋಜನಾ ಕಾರ್ಯಕ್ರಮ ಜಾರಿಯಲ್ಲಿ ಅನಗತ್ಯ ಒತ್ತಾಯ ಅಥವಾ ಬಲವಂತವಿದೆ ಎಂಬ ಆರೋಪವನ್ನು ಈ ಸಂಬಂಧದ ಒಂದು ಸಭೆಯಲ್ಲಿ ಬಲವಾಗಿ ತಿರಸ್ಕರಿಸಿದರು

●

ಪಾಕೀಸ್ತಾನಕ್ಕೆ ಮೂರಾಟ ಮಾಡಬಹುದು

ನವ ದೆಹಲಿ — ಪಾಕೀಸ್ತಾನಕ್ಕೆ ಬಾಂಬರು ಮಾರಾಟ ಬಗ್ಗೆ ಚುನಾಯಿತ ಅಧ್ಯಕ್ಷ ಜಿಮ್ಮಿ ಕಾರ್ಟರ್‌ರಿಗೆ ಬಿಡುವುದಾಗಿ ಅಮೇರಿಕ ಸಂಸ್ಥಾನ ಕಾರ್ಯದರ್ಶಿ ಡಾ|| ಕೆಸಿಂಗರು ಭರವಸೆ ನೀಡಿದ್ದರೂ ಫೋರ್ಡ್ ಆಡಳಿತ ಪಾಕೀಸ್ತಾನಕ್ಕೆ 110 ಎ -7 ಬಾಂಬರು ಮಾರಬಳ್ಳುದೆಂದು ನವ ದೆಹಲಿ ಶಂಕಿಸಿದೆ.

●

76 ರಲ್ಲಿ ಬಾಕಿ ಇದ್ದ ಮೊಕದ್ದಮೆಗಳ ಸಂಖ್ಯೆ

ನವ ದೆಹಲಿ — ಹೈಕೋರ್ಟುಗಳಲ್ಲಿ ಮೊಖದ್ದಮೆಗಳು ಶೀಘ್ರವಾಗಿ ವಿಲೇ ಆಗುತ್ತಿದ್ದರೂ ಜೂನ್ 76 ರಲ್ಲಿ ಇನ್ನೂ 553135 ಇದ್ದವು

○

ರೂ ಮೂರು ಲಕ್ಷ ರೂಪಾಯಿಗಳ ಕೊಡುಗೆ

ಪ್ರಧಾನಿಯವರ ಪರಿಹಾರ ನಿಧಿಯಿಂದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಆಂಧ್ರ ಪ್ರದೇಶದಲ್ಲಿ ಚಂಡಮಾರುತ, ಪ್ರವಾಹ ಪರಿಹಾರ ಕಾರ್ಯಗಳಿಗಾಗಿ 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವರು.

★

ಚಂಡಮಾರುತದಿಂದ ತುಂಬಾ ನಷ್ಟ

ತಿರುಪತಿ — ಕಾಳಹಸ್ತಿ ತಾಲ್ಲೂಕಿನಲ್ಲಿ ಗುರುವಾರ ಮತ್ತು ಶುಕ್ರವಾರ ಚಂಡಮಾರುತ ಪ್ರವಾಹದಿಂದ ಸಾಧಾರಣ ಜೀವಿತ ಹಾನಿಯಾಗಿಲ್ಲ ತುಂಬಾ ನಷ್ಟವಾಗಿದೆ ನೂರುಗಟ್ಟಲೆ ಗುಡಿಸಲು ಮನೆಗಳು ನೆಲ್ಲಾಸಿಕರಣಗಿದ್ದಾರೆ

○

ಪರಿಹಾರ ಕಂಡುಹಿಡಿಯುವ ಮಾರ್ಗದಲ್ಲಿ

ಬೆಂಗಳೂರು — ರಾಜ್ಯದ ಕೆಲವು ಪ್ರಾಸಗಿ ಕಾಲೇಜುಗಳಲ್ಲಿ ತಿಂಗಳುಗಟ್ಟಲೆ ಸಂಬಳ ಪಡೆಯದಿರುವ ಉಪಾಧ್ಯಾಯರಿಗೆ ಪರಿಹಾರ ದೊರಕಿಸಲು ಸರ್ಕಾರ ಮಾರ್ಗ ಕಂಡುಹಿಡಿಯುತ್ತಿರುವುದಾಗಿ ವಿದ್ಯಾಮಂತ್ರಿ ಶ್ರೀ ಯಾಜ್ಞಿಕರವರು ತಿಳಿಸಿದರು.

○

ಭಾರತದಲ್ಲಿ ಚರ್ಮದ ವ್ಯಾಧಿ ಹೊಂದಿರುವವರು

ಕಲ್ಕತ್ತಾ — ದೇಶದ ಜನಸಂಖ್ಯೆಯಲ್ಲಿ ಸಾವಿರದಲ್ಲಿ ಹದಿನಾಲು ಮಂದಿ ಚರ್ಮದ ವ್ಯಾಧಿ ಹೊಂದಿರುವುದಾಗಿ ಈ ವಿಚಾರದಲ್ಲಿ ಸರ್ವೆ ತಿಳಿಸುತ್ತದೆ.

ಪಂಜಾಬಿ ಭಾಷೆಗೆ ಬೈಬಲ್

ಲೂಧಿಯಾನ — ಮೊಟ್ಟ ಮೊದಲನೆದಾಗಿ ಗುರುಮುಖಿ ಲಿಪಿಯಲ್ಲಿ ಪಂಜಾಬಿ ಭಾಷೆಗೆ ಬೈಬಲ್ ಭಾಷಾಂತರವಾಗಿದೆ

★

ವರದಕ್ಷಿಣೆ ವಿವಾದನೆ

ಕಲ್ಕತ್ತಾ — ಮದುವಣಗ ಗೋವಿಂದ ದಾಸ ಗುಪ್ತ, ಅವನ ತಂದೆ ಮತ್ತು ಚಿಕ್ಕಪ್ಪನ ಮೇಲೆ ವರದಕ್ಷಿಣೆ ಪಡೆದ ಅಪಾದನೆಯ ಮೊಟ್ಟ ಮೊದಲನೆಯ ಮೊಕದ್ದಮೆ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಮುಂದೆ ಬಂದಿದೆ ವಧುವಿನ ತಂದೆ ರಾಂಧಾನಿ ಜನ್ಮಾಲ್ ತಾನು ವರನ ಕುಟುಂಬಕ್ಕೆ 5300 ಕೊಟ್ಟಿದುದಾಗಿಯೂ ಮದುವೆಯು ಕಳೆದ ಮಾರ್ಚಿಯಲ್ಲಿ ನಡೆಯಲಿದ್ದಿತೆಂದು ಆಗ ವರನ ತಂದೆ ಮತ್ತು ಚಿಕ್ಕಪ್ಪ ಮತ್ತೆ ಹೆಚ್ಚು ಸಾವಿರ ರೂ ಬೇಕೆಂದರೆಂದೂ, ಕೊಡದಿರಲು ಮದುವೆ ಸಮಯದಲ್ಲಿ ಗಂಡು ಪಕ್ಷದವರಿಂದ ಹೊಟ್ಟು ಹೋದನೆಂದು ತಿಳಿಸಿರುವನು

●

ಪ್ರತಿಮೆ ಸಿಕ್ಕಿತು

ಹಂಪೆಯ ವಿಠಲ ದೇವಾಲಯ ಬಳಿ ಪುರಂದರ ದಾಸರ ಪ್ರತಿಮೆ ಭೂಗರ್ಭ ಶೋಧಕ ತಂಡಕ್ಕೆ ಸಿಕ್ಕಿದೆ.

ಡಕಾಯಿತನ ಅತ್ಯಹತ್ಯೆ

ನವ ದೆಹಲಿ — ದೆಹಲಿ ಪೋಲೀಸರು 2 ತಿಂಗಳುಗಳಿಂದ ಬಂಧನದಲ್ಲಿಟ್ಟಿದ್ದ ಕುಖ್ಯಾತ ಡಕಾಯಿತ ಸುಂದರಸಿಂಗ್ ಪೋಲೀಸರಿಂದ ತಪ್ಪಿಸಿಕೊಂಡು ಗಾಂಧಿನಗರ ಸ್ಮಶಾನದ ಹತ್ತಿರ ಗಂಗಾ ನದಿಗೆ ಹಾರಿಕೊಂಡನು ಪಂಟೂನ್ ಸೇತುವೆ ಹತ್ತಿರ ಅವನ ದೇಹ ಸಿಕ್ಕಿತು.

●

ಲಂಡನ್‌ನಲ್ಲಿರುವ 28 ವರ್ಷದ ಬಂಗಾಳಿಯವನು ವಿಶ್ವದ 850 ಮಿಲಿಯ ಮುಸ್ಲಿಂರಿಗಾಗಿ 33 ಪ್ರಮುಖ ಭಾಷೆಗಳಲ್ಲಿ ಕೊರಾನಿನ ರೆಕಾರ್ಡ್ ಉತ್ಪಾದಿಸುವ ಪ್ರಾಜೆಕ್ಟ್ ಕೈಗೊಂಡಿರುವನು

ಛತ್ರಿ
ರೇನ್ ಕೋಟುಗಳಿಗೆ
ಬ್ಯಾಂಕ್ ರೋಡ್ ಬಾಹುಸಾಲ್
A Firm known for
Genuine Good Business

ಕಾಳುಗಳ ಉತ್ಪಾದನೆಯಲ್ಲಿ ಏರಿಕೆ

ನವ ದೆಹಲಿ — ವಿಶ್ವದಲ್ಲಿ ಕಾಳುಗಳ ಉತ್ಪಾದನೆ ಈ ವರ್ಷ ಒಂದೂವರೆ ಸಾವರದ ಮುನ್ನೂರಾಎಂಬತ್ತು ಟನ್‌ಗಳಷ್ಟು ಹೋದ್ಯವರ್ಷ ಕೈಯಷ್ಟೇಕಡ 7 ಹೆಚ್ಚಾಗಿದೆ.

★

ಕೊಬ್ಬರಿ ಎಣ್ಣೆ ಬೆಲೆ ನಿಯಂತ್ರಣ

ಕೊಟ್ಟಾಯಂ — ಕೊಬ್ಬರಿ ಎಂಣೆ ಮೇಲೆ, ಬೆಲೆ ಭದ್ರಮಾಡಲು ನಿಯಂತ್ರಣವನ್ನು ತರಲಾಗುವುದೆಂದು ಆಹಾರ ಮಂತ್ರಿ ಶ್ರೀ ಪಾಲ್ ಮಣಿಯವರು ಪತ್ರಕೆಯವರಿಗೆ ತಿಳಿಸಿದರು. ಈಗ ಆದರ ಬೆಲೆ, ದಾಖಲಾತಿ ಬೆಲೆ ಕೆಲೋಗೆ ರೂ 15 ರಿಂದ 16 ಇರುವುದಾಗಿ ಹೇಳಿದರು.

○

ಬೆಂಗಳೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭ

ಬೆಂಗಳೂರು — ಬೆಂಗಳೂರು ವಿಶ್ವವಿದ್ಯಾನಿಲಯದ 12 ನೆಯ ಪದವೀದಾನ ಸಮಾರಂಭ ಮುಂದಿನ ತಿಂಗಳು ೧೯ ರಂದು ನಡೆಯುವುದು ಪ್ರವೇಶಧನ 1 ರೂ ಇಡಲಾಗಿದೆ

★

ಭೂಕಂಪಗಳಿಂದ ಮರಣ

ವಾಷಿಂಗ್ಟನ್ — ಈ ವರ್ಷ ವಿವಿಧ ದೇಶಗಳ ಭೂಕಂಪಗಳಲ್ಲಿ 35 ಸಾವಿರ ಜನ ಪತ್ರಿರುವರು

★

ಅತ್ಯುತ್ತಮವಾದ ಪತ್ರಿಕಾ ಸ್ವಾತಂತ್ರ್ಯ

ನೈರೋಬಿ — ಭಾರತದ ಪತ್ರಿಕಾ ಸ್ವಾತಂತ್ರ್ಯವು ವಿಶ್ವದಲ್ಲಿ ಒಂದು ಅತ್ಯುತ್ತಮವಾದುದೆಂದು ಭಾರತದ ವಾಣಿಜ್ಯ ಮಂತ್ರಿ ಶ್ರೀ ಶುಕ್ಲಾ ಒಂದು ಪತ್ರಿಕೆಗಿತ್ರ ಸ್ಪಂದರ್ಶನದಲ್ಲಿ ತಿಳಿಸಿದರು.

★

ಅಂಚೆ ಚೀಟಿ ಮಾರಾಟ — ಭಾರಿ ಆದ ಮೊತ್ತಕ್ಕೆ

ಲಂಡನ್ — ವಿಶ್ವದ ಅತಿ ಅಪೂರ್ವ ಅಂಚೆ ಚೀಟಿಗಳಲ್ಲಿ ಒಂದಾದ 1847 ರ ಮಾರಿಷಸ್ ಅಂಚೆ ಕಚೇರಿಯ 1 ಪೆನ್ನಿ ಅಂಚೆ ಚೀಟಿ ಲೆಕ್ಕೇನ ಸ್ಟೆನ್ನಿನ ಒಬ್ಬ ಖಾಸಗಿ ಅಂಚೆ ಚೀಟಿ ಶೇಖರಿಸುವವನಿಗೆ 59 ಸಾವಿರ ಪೌಂಡುಗಳಿಗೆ ಗುರುವಾರ ಮಾರಲಾಯಿತು.

●

ಗಂಡನಿಗೆ ಜೀವನಾಂಶ ನೀಡಿಕೆ

ಮಿನೇಲಾ (ನ್ಯೂಯಾರ್ಕ್) — ನ್ಯೂಯಾರ್ಕಿನ ಬಾಲ್ಡ್‌ವಿನ್‌ನಲ್ಲಿ ವಾಸಿಸುತ್ತಿರುವ ಭರಿ ಶ್ರೀಮಂತೆ ಸ್ವಂತ ಇಚ್ಛೆಯಿಂದ ಗಂಡನಿಗೆ ಜೀವನಾಂಶ ಕೊಡುವುದಕ್ಕೆ ಸಹಿ ಮಾಡಿರುವುದರಿಂದ ಗಂಡಂದಿರಿಗೆ ಜೀವನಾಂಶ ಅಕ್ಕವಾ ಎನ್ನಲು ಅವಕಾಶ ಇಲ್ಲವೆಂದು ತೀರ್ಪಿತ್ತು ಪಾವತಿ ಮಾಡುವಂತೆ ಆಜ್ಞೆ ಮಾಡಿದರು.

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲ್ಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಸರ್ವಪ್ರಥಮ ವಜ್ರ ಮಹೋತ್ಸವದ ಯಶಸ್ವಿಗಾನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

ವುಡ್‌ಲಾಂಡ್ 26 11 76 ರಿಂದ

ಅವೋಘ ಆರಂಭ

ನೂತ್ರದ ಬೊಂಬೆ

ನಾತ್ಯ — ಶ್ರೀನಾಥ್, ಉದಯಕುಮಾರ್, ನರಸಿಂಹರಾಜು, ವಂಜಾರ್ (ದಕ್ಷಿಣ)

ಕನ್ನಡ

ಕಲರ್

ದಿನ 4 ಪ್ರದರ್ಶನಗಳು

ಅಪೇರಾ 26 11 76 ರಿಂದ

ಅಕ್ಕರ

ಕೆ. ಆರ್. ವಿಜಯ ಜೈಗಣೇಶ್ ಮನೋಹರ್ ಅಭಿನಯ

ತಮಿಳು

ಪ್ರತಿ ದಿನ 3 ಪ್ರದರ್ಶನ

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet Mysore

Edited Printed and Published by Dharmapracharanirata M S. Krishna Rao (Proprietor) at the Satyavadi Press Chamara Mysore 4